## ಸೈನಿಕ ಮಂದಿರ

ಬಾಬಾ ಹರ್ಭಜನ್ ಸಿಂಗ್ ಎಂಬ ಸೈನಿಕನ ಮಂದಿರದ ಸಮೀಪದಲ್ಲಿ ಜೀಪ್ ನಿಂತಿತು. ಆ ಪರಿಸರ ಎಲ್ಲವೂ ಸೇನೆಯ ವಶದಲ್ಲಿದೆ. ಮಂದಿರ ವೀಕ್ಷಿಸಿದ ನಂತರ ಅಲ್ಲೇನಾದರೂ ಖರೀದಿ ಮಾಡಬೇಕೆಂದರೆ ಅಂಗಡಿಯೂ ಇದೆ. ಸೇನೆಯ ಆಫೀಸ್‌ನಲ್ಲಿ ಕೇಳಿದರೆ ಇಲ್ಲಿಗೆ ಬಂದದ್ದಕ್ಕೆ ಒಂದು ಸರ್ಟಿಫಿಕೇಟ್ ಕೂಡಾ ನೀಡುತ್ತಾರೆ. ಅದು

ಅನೇಕರಿಗೆ ತಿಳಿದಿರುವುದಿಲ್ಲ. ನಾವು ಒಳಗೆ ಹೋಗಿ ಕೇಳಬೇಕು. ಅದಕ್ಕೆ ಶುಲ್ಕ ಕೂಡ ಇದೆ.

ನಥುಲಾ ಬಳಿಯ ಬಾಬಾ ಹರ್ಭಜನ್ ಸಿಂಗ್ ಮಂದಿರ ಬಹುಪ್ರಸಿದ್ಧ. 12,400 ಅಡಿ ಎತ್ತರದಲ್ಲಿರುವ ಈ ಕ್ಷೇತ್ರ ಒಬ್ಬ ಸೈನಿಕನ ಮಂದಿರ. ಹರ್ಭಜನ್ ಸಿಂಗ್ ಎಂಬ ಸೈನಿಕನ ಸಮಾಧಿ. ಈ ಸಮಾಧಿಯು ನಾಥುಲಾ ಮತ್ತು ಜೆಲೆಪಲಾದ ರಸ್ತೆಯಲ್ಲಿದೆ. ಈ ಸೈನಿಕ ಸೇನೆಯಲ್ಲಿದ್ದಾಗ ಕಾಣೆಯಾಗಿದ್ದರಂತೆ. ಮೂರು ದಿನಗಳ ನಂತರ ಕೆಲವರಿಗೆ ಕನಸಲ್ಲಿ ಬರುತ್ತಿದ್ದರಂತೆ. ನಂತರ ಈ ಮಂದಿರ ನಿರ್ಮಿಸಿದರು.

ಮತ್ತೆ ಅದೇ ಪರ್ವತ ದಾರಿಯಲ್ಲಿ ಗ್ಯಾಂಗ್ಟಕ್‌ನತ್ತ ನಮ್ಮ ಜೀಪ್ ಮುಖಮಾಡಿತು. ದಾರಿಯುದ್ದಕ್ಕೂ ಟೇಪ್ ಜೋರಾಗಿ ಹಾಕಿದ ಡ್ರೈವರ್: 'ಹಾಡು ಕೇಳದಿದ್ರೆ ನನಗೆ ನಿದ್ದೆ ಬರುವ ಸಾಧ್ಯತೆಗಳಿವೆ, ಅದಕ್ಕೆ ಹಾಕಿದೆ' ಅಂದ.

'ಹಾಕು ಹಾಕು' ಅಂದೆವು. ಅಂತೂ ಸಂಜೆಗೆ ಮತ್ತೆ ಗ್ಯಾಂಗ್ಟಕ್‌ನ ಎಂ.ಜಿ.ರೋಡ್ ತಲುಪಿದೆವು. ಆ ರಸ್ತೆ ಪಾದಚಾರಿಗಳಿಗೆ ಮಾತ್ರ. ವಾಹನಗಳು ಬರುವಂತಿಲ್ಲ. ಹಾಗಾಗಿ ಆರಾಮದಲ್ಲಿ ಶಾಪಿಂಗ್ ಮಾಡಬಹುದು. ಶಾಪಿಂಗ್ ಇಲ್ಲದಿದ್ರೂ ಒಮ್ಮೆ ಸುಮ್ಮನೆ ತಿರುಗಾಡಿ ಬರಬಹುದು.

ಮರುದಿನ ಗ್ಯಾಂಗ್ಟಕ್‌ನ ಇತರ ಪ್ರೇಕ್ಷಣೀಯ ಸ್ಥಳಗಳನ್ನು ಸುತ್ತಾಡಿದೆವು. ತಾಶೀವ್ಯೂ ಪಾಯಿಂಟ್, ಹನುಮಾನ್ ಟೋಕ್, ಹಿಮಾಲಯನ್ ಜುವಾಲಾಜಿಕಲ್ ಪಾರ್ಕ್, ಗಣೇಶ ಟೋಕ್, ಸೆವೆನ್ ಸಿಸ್ಟರ್ ವಾಟರ್ ಫಾಲ್ಸ್, ಎಕ್ಸಿಬಿಷನ್ ಫಲಪುಷ್ಪ ಸೆಂಟರ್, ಬೌದ್ಧಧರ್ಮದ ಶಿಕ್ಷಣ ನೀಡುವ ರುಮ್ ಟೆಕ್ ಬೌದ್ಧ ಮಠ... ಹೀಗೆ ಅನೇಕ ವೀಕ್ಷಣಾ ಸ್ಥಳಗಳಿವೆ. ವ್ಯೂ ಪಾಯಿಂಟ್‌ನಿಂದ ಕಾಂಚನಜಂಗ ಪರ್ವತದ ಸುಂದರ ಶಿಖರವನ್ನು ಕಾಣಬಹುದು. ಈ ಪರ್ವತ ಮೂರು ದೇಶಗಳಲ್ಲಿ – ಭಾರತ, ನೇಪಾಳ, ಟಿಬೆಟ್‌ನಲ್ಲಿ – ವ್ಯಾಪಿಸಿದೆ.

ಗ್ಯಾಂಗ್ಟಕ್ ಉತ್ತರಭಾರತದಲ್ಲಿ ವೈಟ್ ವಾಟರ್ ರ್‍ಯಾಫ್ಟಿಂಗ್‌ಗಾಗಿ ಮೂರನೇ ಅತ್ಯುತ್ತಮ ಸ್ಥಳವೆಂದು ಮನ್ನಣೆ ಪಡೆದಿದೆ. ಬ್ರಿಟಿಷ್ ಕಾಲದಲ್ಲಿ ಟಿಬೆಟ್ ಮತ್ತು ಭಾರತದ ಪ್ರಮುಖ ವ್ಯಾಪಾರ ಕೇಂದ್ರವಾಗಿಯೂ ಈ ನಗರ ಪ್ರಸಿದ್ಧವಾಗಿತ್ತು. ಅದು 'ಸಿಲ್ಕ್ ಮಾರ್ಗ'ಗಳಲ್ಲಿ ಒಂದೆನಿಸಿದೆ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಗ್ಯಾಂಗ್ಟಕ್ ಸ್ವತಂತ್ರ ರಾಜನ ಆಡಳಿತದಲ್ಲಿತ್ತು. 1975ರಲ್ಲಿ ಅದು ಭಾರತದ ರಾಜ್ಯವಾಯಿತು.

## ದುಬಾರಿ ನಗರಿ

ಸಿಕ್ಕಿಂ ಸುತ್ತಾಡಲು ಮಾತ್ರ ತುಂಬಾ ದುಬಾರಿ. ಇಲ್ಲಿನ ಪ್ರವಾಸೋದ್ಯಮವು



## ಸಂಪೂರ್ಣ ಸಾವಯವ

2018ರ ಅಕ್ಟೋಬರ್ ತಿಂಗಳಲ್ಲಿ ಸಂಪೂರ್ಣ ಸಾವಯವ ಕೃಷಿಯನ್ನು ಸಾಧಿಸಿರುವ ಸಿಕ್ಕಿಂಗೆ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯ ಪ್ರತಿಷ್ಠಿತ 'ಆಸ್ಕರ್ ಫಾರ್ ಫ್ಯೂಚರ್ ಪಾಲಿಸಿ ಅವಾರ್ಡ್' ದೊರೆತಿದೆ. ಸಿಕ್ಕಿಂ ರಾಜ್ಯ ಅಳವಡಿಸಿಕೊಂಡಿರುವ ಸುಸ್ಥಿರ ಆಹಾರ ವ್ಯವಸ್ಥೆ, ಕೃಷಿ ಮತ್ತು ಪರಿಸರ ನೀತಿಗಳನ್ನು ಪರಿಗಣಿಸಿ ಈ ಪುರಸ್ಕಾರವು ದೊರೆತಿದೆ. 2003ರಲ್ಲಿ ಸಿಕ್ಕಿಮ್ ಸಾವಯವ ಕೃಷಿಯನ್ನು ಅಳವಡಿಸಿಕೊಂಡ ವರ್ಷ.

ಹಿಂದೂ ಬೌದ್ಧ ಕ್ರೈಸ್ತರು ಇರುವ ಸಿಕ್ಕಿಂನ ಮೂಲನಿವಾಸಿಗಳು ಎಂದರೆ ಲೇಪ್ಚಾ ಮತ್ತು ಭೂಟಿಯಾ. ಇವರ ಜೊತೆ ನೇಪಾಳಿಗಳೂ ಸೌಹಾರ್ದಯುತವಾಗಿ ಬದುಕುತ್ತಿದ್ದಾರೆ. ಈಗೀಗ ಲೇಪ್ಚಾ ಮತ್ತು ಭೂಟಿಯಾ ನಡುವೆ ವಿವಾಹಗಳು ನಡೆಯುತ್ತವೆ.

